# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಡಿಸೆಂಬರ್ 23, 2020

ಸಂಪುಟ : 47 ಸಂಚಿಕೆ : 233 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಸಿಎಂಗೆ ಕೇಸ್ ಕಂಟಕ

ಬೆಂಗಳೂರು, ಡಿ. 22 – ಬೆಳ್ಳಂದೂರು ಬಳಿಯ ಜಮೀನು ಡಿನೋಟಿಫಿಕೇಷನ್ ವಿಚಾರದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ಸಂಕಷ್ಟ ಎದುರಾಗಿದ್ದು, ಅವರ ವಿರುದ್ಧದ ಪ್ರಕರಣ ರದ್ಧತಿಗೆ ಹೈಕೋರ್ಟ್ ನಿರಾಕರಿಸಿದೆ.

ಮಾಜಿ ಸಚಿವ ಆರ್.ವಿ. ದೇಶಪಾಂಡೆ ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ರದ್ದು ಪಡಿಸಿದ ರೀತಿ ಯಲ್ಲೇ ತಮ್ಮ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣವನ್ನೂ ವಜಾಗೊಳಿಸ ಬೇಕೆಂದು ಯಡಿಯೂರಪ್ಪ ದಾಖಲಿ ಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ ಅವರ ಏಕಸದಸ್ಯ ಪೀಠ ತಳ್ಳಿ ಹಾಕಿದೆ.



ಬಿಎಸ್‌ವೈ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣ ರದ್ಧತಿಗೆ ಹೈಕೋರ್ಟ್ ನಕಾರ

ಬೆಳ್ಳಂದೂರು ಬಳಿಯ ದೇವರಬಿಸನಹಳ್ಳಿಯಲ್ಲಿ ಕೆ.ಐ.ಎ.ಡಿ.ಬಿ. ಜಮೀನು ವಶಪಡಿಸಿಕೊಂಡಿತ್ತು. ಆ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಸಮ್ಮಿಶ್ರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರೆ, ದೇಶಪಾಂಡೆ ಸಚಿವರಾಗಿದ್ದರು.

ಕೆ.ಐ.ಎ.ಡಿ.ಬಿ. ಮೂಲಕ 500 ಎಕರೆ ಜಮೀನು ಡಿನೋಟಿಫೈ ಮಾಡಿದ್ದರಿಂದ ಸರ್ಕಾರಕ್ಕೆ ನಷ್ಟವಾಗಿದೆ ಎಂದು ವಾಸುದೇವ ರೆಡ್ಡಿ ಎಂಬುವವರು ಲೋಕಾಯುಕ್ತ ನ್ಯಾಯಾಲಯದ ಎದುರು ಖಾಸಗಿ ದೂರು ದಾಖಲಿಸಿದ್ದರು.

ಈ ಬಗ್ಗೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದರು. ಈ ಆರೋಪಕ್ಕೆ ಸಂಬಂಧಿಸಿದಂತೆ ದೇಶಪಾಂಡೆ ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ರದ್ದು ಮಾಡಿತ್ತು. ಇದನ್ನು ಸುಪ್ರೀಂ ಕೋರ್ಟ್ ಸಹ ಎತ್ತಿ ಹಿಡಿದಿತ್ತು.

ಇದೇ ರೀತಿಯಲ್ಲಿ ತಮ್ಮ ವಿರುದ್ಧದ ಎಫ್.ಐ.ಆರ್. (3ನೇ ಪುಟಕ್ಕೆ)

## ಫೆಬ್ರವರಿವರೆಗೆ ಪರೀಕ್ಷೆ ಇಲ್ಲ

ನವದೆಹಲಿ, ಡಿ. 22 – ಕೊರೊನಾ ಹಿನ್ನೆಲೆಯಲ್ಲಿ ಮುಂದಿನ ವರ್ಷ ಫೆಬ್ರವರಿವರೆಗೆ ಹತ್ತು ಹಾಗೂ 12ನೇ ತರಗತಿಯ ಮಂಡಳಿ ಪರೀಕ್ಷೆಗಳನ್ನು ನಡೆಸುವುದಿಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ತಿಳಿಸಿದ್ದಾರೆ.

ಸಾಮಾನ್ಯವಾಗಿ ಜನವರಿಯಲ್ಲಿ ಹತ್ತು ಹಾಗೂ ಹನ್ನೆರಡನೇ ತರಗತಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ನಡೆಯುತ್ತಿದ್ದವು. ಮಾರ್ಚ್ ವೇಳೆಗೆ ಪರೀಕ್ಷೆಗಳು ಪೂರ್ಣವಾಗುತ್ತಿದ್ದವು.

# ಮೊದಲ ಹಂತದ ಮತದಾನ ಶಾಂತಿಯುತ

## ದಾವಣಗೆರೆ ಶೇ.85.54, ಜಗಳೂರು ಶೇ.83.96, ಹೊನ್ನಾಳಿ ಶೇ.86.32 ಮತದಾನ





ದಾವಣಗೆರೆ, ಡಿ.22- ಗ್ರಾಮಗಳ ಅಭಿವೃದ್ಧಿಗೆ ಮುನ್ನುಡಿ ಬರೆಯುವ ಮೊದಲ ಹಂತದಲ್ಲಿ ಮೂರು ತಾಲ್ಲೂಕುಗಳಲ್ಲಿ ನಡೆದ ಪಂಚಾಯ್ತಿ ಚುನಾವಣೆ ಯಲ್ಲಿ ಶೇ.85.27ರಷ್ಟು ಮತದಾನವಾಗಿದೆ.

ದಾವಣಗೆರೆಯ 38, ಹೊನ್ನಾಳಿಯ 28 ಹಾಗೂ ಜಗಳೂರಿನ 22 ಗ್ರಾ.ಪಂ.ಗಳಿಗೆ ಮಂಗಳ ವಾರ ಚುನಾವಣೆ ಶಾಂತಿಯುತ ವಾಗಿ ನಡೆಯಿತು.

ದಾವಣಗೆರೆ ತಾಲ್ಲೂಕಿನಲ್ಲಿ ಶೇ85.54, ಜಗಳೂರು ಶೇ.83.96 ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ ಶೇ.86.32 ರಷ್ಟು ಮತದಾನವಾಗಿದೆ.

ಹಳ್ಳಿಗಳಲ್ಲಿ ಬೆಳಿಗ್ಗೆಯಿಂದಲೇ ಚುನಾವಣಾ ಕಣ ರಂಗೇರಿತ್ತು. ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು. ಮಹಿಳೆಯರು ಚಿಕ್ಕ ಮಕ್ಕಳೊಂದಿಗೆ ಬಂದು ಹಕ್ಕು ಚಲಾಯಿಸಲು ಸರದಿಗೆ ನಿಂತರೆ, ವಯಸ್ಸಾದವರೂ ತಾವೇನು ಕಡಿಮೆ ಎಂಬಂತೆ ಹುಮ್ಮಸ್ಸಿನಿಂದಲೇ ಆಗಮಿಸಿದ್ದರು.

ಯುವಕರು ಮತದಾರರನ್ನು ಕರೆತರುವಲ್ಲಿ ತಲ್ಲೀನ ರಾಗಿದ್ದರು. ಅಲ್ಲಲ್ಲಿ ಗುಂಪುಗಳು, ಆಟೋ, ಬೈಕುಗಳಲ್ಲಿ ಮತದಾರರನ್ನು ಕರೆ ತರುತ್ತಿದ್ದ ಚಿತ್ರಣ ಸಾಮಾನ್ಯವಾಗಿತ್ತು. ಬೆಳಿಗ್ಗೆಯೇ ಮತ ಚಲಾಯಿಸಿ ಕೆಲಸ ಕಾರ್ಯಗಳಿಗೆ ಹೊರಡುವ ಹಳ್ಳಿಗರ ನಿರ್ಧಾರವೂ ಸರದಿ ಸಾಲು ಉದ್ದವಾಗಲು ಕಾರಣವಾಗಿತ್ತು. ಮತ ಕೇಂದ್ರಗಳ ಸಮೀಪ ಅಭ್ಯರ್ಥಿಗಳು ಹಾಗೂ ಬೆಂಬಲಿಗರ ಗುಂಪು ಮತದಾರರ ಓಲೈಕೆಗೆ ಕೊನೆ ಕ್ಷಣದ ಕಸರತ್ತು ನಡೆಸುತ್ತಲೇ ಇತ್ತು.

ಅಣಜಿ ಗ್ರಾಮ ಪಂಚಾಯ್ತಿಯ ಮೆಳ್ಳೇಕಟ್ಟೆ ಗ್ರಾಮದ ಮತ ಕೇಂದ್ರ ಸಂಖ್ಯೆ 35ರಲ್ಲಿ ಬೆಳಿಗ್ಗೆ 9 ಗಂಟೆಗೆ 917 ಜನರ ಪೈಕಿ 90 ಜನ ಮತ ಚಲಾಯಿಸಿದ್ದರು.

**ಪ್ರಥಮಬಾರಿ ಹಕ್ಕು ಚಲಾಯಿಸಿದ ಸಂಭ್ರಮ:** ಮೆಳ್ಳೆಕಟ್ಟೆ ಗ್ರಾಮದ ಎಸ್. (2ನೇ ಪುಟಕ್ಕೆ)

### ಸೀರೆಯ ಸೆರಗೇ ಮಾಸ್ಕ್, ಅಂತರವಿಲ್ಲ

ಮತದಾನಕ್ಕೆ ಬಂದ ಬಹುತೇಕ ಮತದಾರರು ಮಾಸ್ಕ್ ರಹಿತವಾಗಿಯೇ ಆಗಮಿಸಿದ್ದರು. ಮತ ಕೇಂದ್ರಕ್ಕೆ ಬಂದಾಗ ಸಿಬ್ಬಂದಿಗಳ ಒತ್ತಾಯಕ್ಕೆ ಹೆಗಲ ಮೇಲಿದ್ದ ಟವಲ್ ಮುಖಕ್ಕೆ ಕಟ್ಟಿಕೊಂಡರೆ, ಹೆಂಗಸರು ಸೀರೆಯ ಸೆರಗನ್ನೇ ಮುಖಕ್ಕೆ ಸುತ್ತಿಕೊಳ್ಳುತ್ತಿದ್ದಾರೆ. ಪ್ರವೇಶ ದ್ವಾರದಲ್ಲಿ (2ನೇ ಪುಟಕ್ಕೆ)

### ಇಬ್ಬರು ಕೊರೊನಾ ಸೋಂಕಿತರ ಮತದಾನ

ದಾವಣಗೆರೆ ತಾಲ್ಲೂಕಿನಲ್ಲಿ ಕೋವಿಡ್ ಪಾಸಿಟಿವ್ ಇರುವ 16 ಮತದಾರರ ಪೈಕಿ ಲೋಕಿಕೆರೆಯಲ್ಲಿ ಒಬ್ಬರು ಮಾತ್ರ ಮತ ಚಲಾಯಿಸಿದ್ದಾರೆ. ಜಗಳೂರು ತಾಲ್ಲೂಕಿನಲ್ಲಿ ಕೋವಿಡ್ ಪಾಸಿಟಿವ್ ಇರುವ 13 ಜನರ ಪೈಕಿ ಉದ್ದಗಟ್ಟದಲ್ಲಿ ಒಬ್ಬರು ಮಾತ್ರ ಮತ ಚಲಾಯಿಸಿದ್ದಾರೆ. ಹೊನ್ನಾಳಿ ತಾಲ್ಲೂಕಿನಲ್ಲಿ ಪಾಸಿಟಿವ್ ಇರುವ 6 ಮತದಾರರು ಮತ ಚಲಾಯಿಸಲು ನಿರಾಕರಿಸಿದ್ದಾರೆ.

### ಹೆಬ್ಬಾಳು ಗ್ರಾಮದಲ್ಲಿ ಮತದಾನ ಮುಂದೂಡಿಕೆ

ದಾವಣಗೆರೆ ತಾಲ್ಲೂಕು ಹೆಬ್ಬಾಳು ಗ್ರಾಮ ಪಂಚಾಯ್ತಿ ಮತಗಟ್ಟೆ ಸಂಖ್ಯೆ 108 ಹಾಗೂ 109ರ ಮತ ದಾರರ ಪಟ್ಟಿ ಅದಲು ಬದಲಾದ ಕಾರಣ ಮತದಾನ ಮುಂದೂಡಲಾಗಿದೆ.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಹನುಮಂತರಾಯ, ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಗಿರೀಶ್, ಸಹಾಯಕ ಕೃಷಿ ನಿರ್ದೇಶಕ ರೇವಣ ಸಿದ್ದನಗೌಡ ಸೇರಿದಂತೆ ಅಧಿಕಾರಿಗಳು ಹೆಬ್ಬಾಳು ಗ್ರಾಮ ಪಂಚಾಯ್ತಿಗೆ ಆಗಮಿಸಿ ಪರಿಶೀಲಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ಎರಡು ಮತಗಟ್ಟೆಗಳ ಮತದಾರರ ಪಟ್ಟಿ ಅದಲು ಬದಲಾಗಿದ್ದು, ಚುನಾವಣೆಗೆ ಸ್ಪರ್ಧಿಸಿದ್ದ 12 ಜನರು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದಾಖಲೆ (2ನೇ ಪುಟಕ್ಕೆ)



## ದೂಡಾದಿಂದ ಅಲಂಕಾರಿಕ ಎಲ್‌ಇಡಿ ದೀಪದ ಕಂಬಗಳ ಉದ್ಘಾಟನೆ



ದಾವಣಗೆರೆ, ಡಿ. 22 - ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದ ಹೊಂಡದ ವೃತ್ತದಿಂದ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಮುಖಾಂತರ ಹಗೇದಿಬ್ಬ ವೃತ್ತದವರೆಗೆ ಮತ್ತು ಎಸ್. ಕೆ.ಪಿ ಗಣೇಶ ದೇವಸ್ಥಾನದವರೆಗೆ ಅಳವಡಿಸಲಾಗಿರುವ ಅಲಂಕಾರಿಕ ಕೋನಿಕಲ್ ಎಲ್.ಇ.ಡಿ ದೀಪದ ಕಂಬಗಳ ಉದ್ಘಾಟನೆಯನ್ನು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಸಂಜೆ ನೆರವೇರಿಸಿದ್ದಾರೆ.

ಬೀರೂರು - ಸಮ್ಮಸಗಿ (ಪಿ.ಬಿ) ರಸ್ತೆಯ ಉಳಿದ ಪ್ರದೇಶದ ಮಿಡಿಯಾದಲ್ಲಿ ಹಾಲಿ ಬೆಡ್ ಹಾಕಿರುವ ಸ್ಥಳದಲ್ಲಿ ಹೊಸದಾಗಿ ಅಲಂಕಾರಿಕ ಕಂಬಗಳನ್ನು ಹಾಗೂ ಎಲ್.ಇ.ಡಿ ಬೀದಿ ದೀಪ ಕಂಬಗಳನ್ನೂ ಉದ್ಘಾಟಿಸಲಾಗಿದೆ.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಈ (2ನೇ ಪುಟಕ್ಕೆ)

## ನಗರದಲ್ಲಿ ಸಹಕಾರ ಭವನ ನಿರ್ಮಾಣ



ದಾವಣಗೆರೆ, ಡಿ. 22 - ಸಹಕಾರ ಚಳವಳಿಯು ಸತ್ಯ ಮತ್ತು ಪ್ರಾಮಾಣಿಕತೆ ಯಿಂದ ಬಲಿಷ್ಟವಾಗ ಬೇಕಾಗಿದೆ ಎಂದು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರೂ, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷರೂ ಆದ ಎನ್.ಎ.ಮುರುಗೇಶ್ ಪ್ರತಿಪಾದಿಸಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ನಿನ್ನೆ ನಡೆದ ಜಿಲ್ಲಾ ಸಹಕಾರ ಯೂನಿಯನ್ ನ 17ನೇ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸುಮಾರು 1176 ವಿವಿಧ ರೀತಿಯ ಸಹಕಾರಿ (3ನೇ ಪುಟಕ್ಕೆ)



**ಮರುಳಸಿದ್ದೇಶ್ವರನಿಗೆ ಸಹಸ್ರ ದೀಪೋತ್ಸವ**

ದಾವಣಗೆರೆಯ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿರುವ ವಿಶ್ವಬಂಧು ಶ್ರೀ ಮರುಳಸಿದ್ದೇಶ್ವರ ದೇವಸ್ಥಾನದಲ್ಲಿ 13ನೇ ವರ್ಷದ ಕಾರ್ತಿಕ ಮಹೋತ್ಸವದ ಸಹಸ್ರ ದೀಪೋತ್ಸವವು ಸೋಮವಾರ ನಡೆಯಿತು.

## ಸರ್ಕಾರಿ ವೈದ್ಯರಿಗೆ ವೇತನ ಹೆಚ್ಚಳ

### ಮಾಸಿಕ 9,500 ರೂ.ಗಳಿಂದ ಗರಿಷ್ಠ 55,100 ರೂ. ವರೆಗೆ ಏರಿಕೆ

ಬೆಂಗಳೂರು, ಡಿ. 22 - ಸರ್ಕಾರಿ ವೈದ್ಯರಿಗೆ ಬಂಪರ್ ಕೊಡುಗೆ ನೀಡಿರುವ ರಾಜ್ಯ ಸರ್ಕಾರ, ಅವರ ವೇತನವನ್ನು ಮಾಸಿಕ 9,500 ರೂ.ಗಳಿಂದ ಗರಿಷ್ಠ 55,100 ರೂ. ವರೆಗೆ ಹೆಚ್ಚಳ ಮಾಡಿದೆ.

ವೈದ್ಯರ ಸೇವೆ ಮತ್ತು ವಿದ್ಯಾರ್ಹತೆಯನ್ನು ಪರಿಗಣಿಸಿ, ವಿವಿಧ ಹಂತಗಳಲ್ಲಿ ವೇತನ ಹೆಚ್ಚಿಸಿರುವುದಲ್ಲದೆ, ಸೆಪ್ಟೆಂಬರ್ 1ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ತರಲಾಗಿದೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್, ಕೋವಿಡ್ ಸಂದರ್ಭದಲ್ಲಿ ವೈದ್ಯರ ಸೇವೆ ಪರಿಗಣನೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯುವ ವೈದ್ಯರ ಸೇವೆ ಪ್ರೋತ್ಸಾಹಿಸಲು ಈ ನಿರ್ಧಾರ ಕೈಗೊಂಡಿದ್ದಾರೆ.

ಈ ಹಿಂದೆ 2015ರಲ್ಲಿ ವಿಶೇಷ (3ನೇ ಪುಟಕ್ಕೆ)







# ಪಂಚಮಸಾಲಿಗರಿಗೆ 2ಎ ಮೀಸಲಾತಿ ಸಿಗದಿದ್ದರೆ ಉಪವಾಸ

ದಾವಣಗೆರೆ, ಡಿ.22- ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ನೀಡುವಂತೆ ಸಮಾಜದಿಂದ ಶಾಂತಿಯುತ ಹೋರಾಟ ನಡೆಯುತ್ತಿದ್ದು, ಬೇಡಿಕೆಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಕ್ರಾಂತಿಯುತ ಹೋರಾಟಕ್ಕೆ ಸರ್ಕಾರವೇ ಹೊಣೆಯಾಗಲಿದೆ ಎಂದು ಕೂಡಲ ಸಂಗಮದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು.





ಶ್ರೀಗಳ ಜನ್ಮ ದಿನದ ಪ್ರಯುಕ್ತ ರಾಜ್ಯಾದ್ಯಂತ ರಕ್ತದಾಸೋಹ ಕಾರ್ಯಕ್ರಮ ವಿದ್ದು, ಇದಕ್ಕೆ ನಗರದ ಸದ್ಯೋಜಾತ ಶಿವಾಚಾರ್ಯ ಮಂದಿರದಲ್ಲಿ ಶ್ರೀ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಜಿಲ್ಲೆಯಿಂದ ರಕ್ತ ದಾಸೋಹ ಕಾರ್ಯಕ್ರಮ ವನ್ನು ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ರಕ್ತದಾನ ಮಾಡುವುದರ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶ್ರೀಗಳು, ಕಳೆದ 20 ವರ್ಷಗಳಿಂದ ಆಡಳಿತ ಮಾಡಿದ ಎಲ್ಲಾ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟು, ಸನ್ಮಾನಿಸಿ ಗೌರವಿಸಿ ಸಾಕಾಗಿದೆ. ಬೆಳಗಾವಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಉಪವಾಸ ಸತ್ಯಾಗ್ರಹ ಮಾಡಿದ್ದೇವೆ. ಇದೀಗ ರಕ್ತ ದಾಸೋಹ ಮೂಲಕ ರಾಜ್ಯಾದ್ಯಂತ ಹೋ ರಾಟ ಮಾಡುತ್ತಿದ್ದೇವೆ. ಇದೀಗ ನಮ್ಮದು ಹೋರಾಟದ ಮೂಲಕವೇ ಸಮಾಜದ ಏಳಿಗೆಗಾಗಿ 2 ಎ ಮೀಸಲಾತಿ ಪಡೆಯಬೇ ಕಿದೆ. ನಮ್ಮ ಸಮಾಜಕ್ಕೆ ಮನವಿ, ಗೌರವ ನೀಡುವುದರ ಜೊತೆಗೆ ಮನಸ್ಸು ಮಾಡಿದರೆ ಮೀಸಲಾತಿ ಪಡೆಯುವ ಸಾಮರ್ಥ್ಯವನ್ನು ಕೂಡ ಪಾದಯಾತ್ರೆ ಮುಖೇನ ಪ್ರದರ್ಶಿಸಲಾಗುವುದು ಎಂದು ತಿಳಿಸಿದರು.

ಮೀಸಲಾತಿ ವಿಚಾರವಾಗಿ ಜನವರಿ 14ರಿಂದ ಕೂಡಲ ಸಂಗಮದಿಂದ ಬೆಂಗಳೂ ರಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಹರಿಹರ ಪಂಚಮಸಾಲಿ ಪೀಠ ಹಾಗೂ ಕೂಡಲ ಸಂಗಮ ಪೀಠ 2 ಎ ಮೀಸಲಾತಿ ಯಲ್ಲಿ ಒಂದಾಗಿ ಹೋರಾಟ ಮಾಡುತ್ತಿದ್ದೇವೆ ನಾವು ಬೀದಿಗಳಿದು ಹೋರಾಟ ಮಾಡುತ್ತಿದ್ದೇವೆ. ಹರಿಹರದ ಪೀಠವು ಮನವಿ ನೀಡುವ ಮೂಲಕ ಹೋರಾಟ ಮಾಡುತ್ತಿದೆ. ನಾವು ರಕ್ತ ದಾಸೋಹದ ಮೂಲಕ ಸರ್ಕಾರಕ್ಕೆ ಮೀಸಲಾತಿಯ ಒತ್ತಾಯದ ಜೊತೆಗೆ ಅಮೂಲ್ಯವಾದ ಜೀವ ಉಳಿಸುವ ಕಾರ್ಯ ಮಾಡುತ್ತಿದ್ದೇವೆ. ಬುಧವಾರದಿಂದ ರಾಜ್ಯಾದ್ಯಂತ ಆಯಾ ಜಿಲ್ಲಾ ಕೇಂದ್ರದಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ಭಕ್ತರು ರಕ್ತದಾನ ಮಾಡಲಿದ್ದಾರೆ ಎಂದು ಹೇಳಿದರು.


ಚನ್ನಪ್ಪ ಕುಂಟೋಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಲಿಂಗಾಯತ ಪಂಚಮಸಾಲಿ ಸಮಾಜ ಯುವ ಘಟಕ ಉಸ್ತುವಾರಿ ಶ್ರೀಧರ್ ಪಾಟೀಲ್, ಹೆಚ್.ಸಿ. ಜಯಮ್ಮ, ಉಮೇಶ್, ಸುಭಾಷ್ ಚಂದ್ರ, ಗೋಪನಾಳ್ ಅಶೋಕ್ ಕುಮಾರ್, ರುದ್ರಮ್ಮ ಮಲ್ಲಿಕಾರ್ಜುನ್, ಹಗಡಿ ಚನ್ನಬಸಪ್ಪ, ಜಿಲ್ಲಾಸ್ಪತ್ರೆ ರಕ್ತ ಭಂಡಾರದ ಡಾ. ಗೀತಾ, ನಾಗರಸನಹಳ್ಳಿ ಬಸವರಾಜು, ವಿರೂಪಾಕ್ಷಪ್ಪ, ಅಶೋಕ್, ಪ್ರಭುದೇವ್, ಗುಜರಿ ವಿಜಯ್ ಕುಮಾರ್, ತಣಿಗೆರೆ ಶಿವಕುಮಾರ್, ಒಣ ರೊಟ್ಟಿ ಮಹಾಂತೇಶ್, ಸುಭಾಷ್, ಕೆ.ವಿ. ಚೇ ತನ್, ಶಿವಣ್ಣ, ಬಸವಾಪುರ ಶಶಿಧರ್ ಮತ್ತಿ ತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಭು ಕಲ್ಬುರ್ಗಿ ನಿರೂಪಿಸಿದರು. ಗಂಗಾಧರ್ ಕಾರಿಗನೂರು ಸ್ವಾಗತಿಸಿದರು.

### ಜಯಮೃತ್ಯುಂಜಯ ಶ್ರೀಗಳಿಗೆ ಪುಷ್ಪವೃಷ್ಟಿ

ಜನ್ಮದಿನದ ಅಂಗವಾಗಿ ಜಯ ಮೃತ್ಯುಂಜಯ ಶ್ರೀಗಳಿಗೆ ಭಕ್ತರು, ಸಮಾಜದ ಮುಖಂಡರು ಸುಮಾರು 30 ಕೆಜಿಯಷ್ಟು ಸೇವಂತಿಗೆ ಪುಷ್ಪ ಸುರಿಸಿ ಅದರಲ್ಲೇ ಸ್ವಾಮೀಜಿ ಅವರನ್ನು ಮಿಂದೇಳಿಸುವ ಮೂಲಕ ತಮ್ಮ ಭಕ್ತಿ ಸಮರ್ಪಿಸುವುದರೊಂದಿಗೆ ಜನ್ಮದಿನದ ಶುಭ ಕೋರಿದರು. ಭಕ್ತರ ಅಪೇಕ್ಷೆ ಮೇರೆಗೆ ಶ್ರೀಗಳು ಕೇಕ್ ಕತ್ತರಿಸಿ ಸಿಹಿ ಹಂಚಿ ಸಂಭ್ರಮಿಸಿದರು.

## ಹೊನ್ನಾಳಿ : ಕಾಂಗ್ರೆಸ್‌ಗೆ 20 ಕ್ಕೂ ಹೆಚ್ಚು ಗ್ರಾ.ಪಂ. ಗಳಲ್ಲಿ ಗೆಲುವು ; ಶಾಂತನಗೌಡ



ಹೊನ್ನಾಳಿ, ಡಿ.22- ಮಾಜಿ ಶಾಸಕ ಶಾಂತನಗೌಡ ಅವರು ಬೆನಕನಹಳ್ಳಿ ಗ್ರಾಮದ ವಾರ್ಡ್ 1ರ 89ನೇ ಬೂತ್‌ನಲ್ಲಿ ಇಂದು ಮತದಾನ ಮಾಡಿ ದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ತಾಲ್ಲೂಕಿನಲ್ಲಿ 20 ಕ್ಕೂ ಹೆಚ್ಚು ಪಂಚಾಯ್ತಿಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್.ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಜಯನಗರ, ದುರ್ಗಾಂಬಿಕಾ ದೇವಸ್ಥಾನ ಸುತ್ತಮುತ್ತ, ಎಸ್.ಎಸ್.ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ವಿವೇಕಾನಂದ ಫೀಡರ್ ವ್ಯಾಪ್ತಿಯ ಸ್ವಾಮಿ ವಿವೇಕಾನಂದ ಬಡಾವಣೆ 8ನೇ ಮೇನ್, ತರಳಬಾಳು ಕೃಷಿ ಕೇಂದ್ರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಶಾಮನೂರು ಫೀಡರ್ ವ್ಯಾಪ್ತಿಯ ಬನಶಂಕರಿ ಬಡಾವಣೆ (ಬೈಪಾಸ್ ರಸ್ತೆ) ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಗರದಲ್ಲಿ ಸಹಕಾರ ಭವನ ನಿರ್ಮಾಣ



### ಜಿಲ್ಲಾ ಸಹಕಾರ ಯೂನಿಯನ್ ಹೆಸರು ಬದಲಾವಣೆಗೆ ಅಸ್ತು

ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ಹೆಸರನ್ನು ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ಎಂದು ಬದಲಾಯಿಸಲು ಜಿಲ್ಲಾ ಸಹಕಾರ ಯೂನಿ ಯನ್ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಲಾ ಯಿತು. ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎನ್.ಎ.ಮುರುಗೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಬೈಲಾ ತಿದ್ದುಪಡಿಯನ್ನು ಮಂಡಿಸಿದಾಗ ಸಭೆ ತನ್ನ ಅನುಮೋದನೆ ನೀಡಿ, ಯೂನಿಯನ್ ಬದಲಾಗಿ ಒಕ್ಕೂಟ ಎಂದು ಸೇರಿಸಬೇಕೆಂದು ಸಭೆ ತೀರ್ಮಾನ ಕೈಗೊಂಡಿತು.

**(1ನೇ ಪುಟದಿಂದ)** ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಸಹಕಾರ ಚಳುವಳಿಗೆ ಅಗತ್ಯವಿರುವ ಶಿಕ್ಷಣ, ತರಬೇತಿ ಮತ್ತು ಪ್ರಚಾರ ನೀಡುವ ನೆಲೆಯಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಪರಿಣಾಮಕಾರಿ ಯಾಗಿ ತನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಸಹಕಾರ ಯೂನಿಯನ್ ಅನೇಕ ಸೇವಾ ಕಾರ್ಯಗಳನ್ನು ಕೈಗೊಂಡಿದೆ. ಕೊರೊನಾ ವಾರಿಯರ್ಸ್ ಅಂಗನವಾಡಿ ಕಾರ್ಯಕರ್ತೆಯರಿಗೆ ಯೂನಿಯನ್ ನಿಂದ ಪ್ರೋತ್ಸಾಹ ಧನ ನೀಡಲಾಗಿದೆ ಎಂದು ಮುರುಗೇಶ್ ವಿವರಿಸಿದರು.

ನಗರದಲ್ಲಿ ಸಹಕಾರ ಭವನಕ್ಕೆ ನಿವೇಶನ ಒದಗಿಸಲು ಸಹಕಾರ ಸಚಿವ ಸೋಮಶೇಖರ್ ಅವರು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅವರಿಗೆ ಸೂಚನೆ ನೀಡಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಜೆ. ಆರ್.ಷಣ್ಮುಖಪ್ಪ ಮಾತನಾಡಿ, ಪ್ರಧಾನಿ ಮೋದಿಯವರ ಮಹತ್ವಾಕಾಂಕ್ಷೆಯ ಜನೌಷಧಿ ಯೋಜನೆಯಿಂದ ಜನಸಾಮಾನ್ಯರಿಗೆ ಅನುಕೂಲವಾಗಿದ್ದು, ಸಹಕಾರ ಮಹಾ ಮಂಡಲ ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶ್ರಮಿಸುತ್ತಿದೆ ಎಂದು ಹೇಳಿದರು.

ಸಂಗೀತ ರಾಘವೇಂದ್ರ ಅವರ ಪ್ರಾರ್ಥನೆಯ ನಂತರ ಸಹಕಾರ ಯೂನಿಯನ್ ನಿರ್ದೇಶಕ ಸಿರಿಗೆರೆ ರಾಜಣ್ಣ ಸ್ವಾಗತಿಸಿದರು. ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಹೆಚ್.ಸಂತೋಷ್ ಕುಮಾರ್ ಕಾರ್ಯಕ್ರಮವನ್ನು ನಿರೂಪಿಸಿದರು.

ಸಹಕಾರ ಯೂನಿಯನ್ ಉಪಾಧ್ಯಕ್ಷ ಹೆಚ್. ಬಸವರಾಜಪ್ಪ, ನಿರ್ದೇಶಕರಾದ ಗಿಡ್ಡಳ್ಳಿ ನಾಗರಾಜ್, ಟಿ.ರಾಜಣ್ಣ, ಬಿ.ಶೇಖರಪ್ಪ, ಆರ್.ಎಂ.ಮಾಲತೇಶ್, ಶ್ರೀಮತಿ ಅನ್ನಪೂರ್ಣ, ಶ್ರೀಮತಿ ಶಿವಗಂಗಮ್ಮ ಮತ್ತಿತರರಿದ್ದರು.

ಮಹಿಳಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀಮತಿ ನಿರ್ಮಲಾ ಸುಭಾಷ್, ಸಹಕಾರಿ ಧುರೀಣರಾದ ಜಯರುದ್ರೇಶ್, ವೀರಯ್ಯ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಯೂನಿಯನ್ ವ್ಯವಸ್ಥಾಪಕ ಜಗದೀಶ್, ಸಿಬ್ಬಂದಿ ವರ್ಗದ ವಿ.ರಂಗನಾಥ್, ಆರ್.ಸ್ವಾಮಿ ಮತ್ತಿತರರಿದ್ದರು.

# ಸರ್ಕಾರಿ ವೈದ್ಯರಿಗೆ ವೇತನ ಹೆಚ್ಚಳ

**(1ನೇ ಪುಟದಿಂದ)** ಭತ್ಯೆಗಳನ್ನು ಪರಿಷ್ಕರಿಸಲಾಗಿತ್ತು. ನೇಮಕಾತಿ ಸಮಯದಿಂದ 6 ವರ್ಷಗಳ ವರೆಗೆ ಸೇವೆ ಸಲ್ಲಿಸಿದ ಎಂಬಿಬಿಎಸ್ /ಬಿಡಿಎಸ್ ವಿದ್ಯಾರ್ಹತೆ ವೈದ್ಯರಿಗೆ ಮಾಸಿಕ 21,000 ರೂ.ನಿಂದ 30,500 ರೂ., ಸ್ನಾತಕೋತ್ತರ ಪದವಿ/ಡಿಪ್ಲೋಮಾ ವಿದ್ಯಾರ್ಹತೆ ವೈದ್ಯರಿಗೆ ಮಾಸಿಕ 42,600 ರೂ.ನಿಂದ 55,500 ರೂ., ವಿಶೇಷ ಪರಿಣಿತಿಯ ಸೂಪರ್ ಸ್ಪೆಷಾಲಿಟಿ ವಿದ್ಯಾರ್ಹತೆ ವೈದ್ಯರಿಗೆ ಮಾಸಿಕ 50,800 ರೂ.ನಿಂದ 64,500 ರೂ.ವರೆಗೆ ಹೆಚ್ಚಿಸಲಾಗಿದೆ.

ಆರರಿಂದ 13 ವರ್ಷಗಳ ಸೇವೆ ಸಲ್ಲಿಸಿದ ಎಂಬಿಬಿಎಸ್/ಬಿಡಿಎಸ್ ಅರ್ಹತೆ ಹೊಂದಿದ ವೈದ್ಯರಿಗೆ ಮಾಸಿಕ 22,000 ರೂ.ನಿಂದ 37,500 ರೂ., ಸ್ನಾತಕೋತ್ತರ ಪದವಿ/ಡಿಪ್ಲೋಮಾ ವಿದ್ಯಾರ್ಹತೆ ವೈದ್ಯರಿಗೆ ಮಾಸಿಕ 43,700 ರೂ.ನಿಂದ 64,500 ರೂ., ವಿಶೇಷ ಪರಿಣಿತಿಯ ಸೂಪರ್ ಸ್ಪೆಷಾಲಿಟಿ ವಿದ್ಯಾರ್ಹತೆ ವೈದ್ಯರಿಗೆ ಮಾಸಿಕ 52,100 ರೂ.ನಿಂದ 73,500 ರೂವರೆಗೆ ಹೆಚ್ಚಿಸಲಾಗಿದೆ.

13 ರಿಂದ 20 ವರ್ಷಗಳ ಸೇವೆ ಸಲ್ಲಿಸಿದ ಎಂಬಿಬಿ ಎಸ್/ಬಿಡಿಎಸ್ ಅರ್ಹತೆ ಹೊಂದಿದವರಿಗೆ ಮಾಸಿಕ 23,000 ರೂ.ನಿಂದ 44,500 ರೂ., ಸ್ನಾತಕೋತ್ತರ ಪದವಿ/ಡಿಪ್ಲೋಮಾ ವಿದ್ಯಾರ್ಹತೆಯವರಿಗೆ ಮಾಸಿಕ 44,800 ರೂ.ನಿಂದ 73,500 ರೂ., ಸೂಪರ್ ಸ್ಪೆಷಾಲಿಟಿ ವಿದ್ಯಾರ್ಹತೆ ಇರುವವರಿಗೆ ಮಾಸಿಕ 58,400 ರೂ.ನಿಂದ 83,500 ರೂ.ಗೆ ಹೆಚ್ಚಿಸಲಾಗಿದೆ.

20-25 ವರ್ಷ ಸೇವೆ ಸಲ್ಲಿಸಿದ ಎಂಬಿಬಿಎಸ್/ ಬಿಡಿಎಸ್ ಅರ್ಹತೆ ಹೊಂದಿದವರಿಗೆ ಮಾಸಿಕ 23,000 ರೂ.ನಿಂದ 52,500 ರೂ., ಸ್ನಾತಕೋತ್ತರ ಪದವಿ/ಡಿಪ್ಲೋಮಾ ವಿದ್ಯಾರ್ಹತೆಯವರಿಗೆ ಮಾಸಿಕ 44,800 ರೂ.ನಿಂದ 83,500 ರೂ., ಸೂಪರ್ ಸ್ಪೆಷಾಲಿಟಿ ವಿದ್ಯಾರ್ಹತೆಯವರಿಗೆ ಮಾಸಿಕ 58,400 ರೂ.ನಿಂದ 93,500 ರೂ.ಗೆ ಹೆಚ್ಚಿಸಲಾಗಿದೆ.

25 ವರ್ಷಕ್ಕಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದ ಎಂಬಿಬಿಎಸ್/ಬಿಡಿಎಸ್ ಅರ್ಹತೆ ಹೊಂದಿದವರಿಗೆ ಮಾಸಿಕ 23,000 ರೂ.ನಿಂದ 60,500 ರೂ., ಸ್ನಾತಕೋತ್ತರ ಪದವಿ/ಡಿಪ್ಲೋಮಾ ವಿದ್ಯಾರ್ಹತೆಯವರಿಗೆ ಮಾಸಿಕ 44,800 ರೂ.ನಿಂದ 93,500 ರೂ., ಸೂಪರ್ ಸ್ಪೆಷಾಲಿಟಿ ವಿದ್ಯಾರ್ಹತೆಯವರಿಗೆ ಮಾಸಿಕ 58,400 ರೂ.ನಿಂದ 1,03,500 ರೂ.ಗೆ ಹೆಚ್ಚಿಸಲಾಗಿದೆ.

ಕರ್ನಾಟಕ ವೈದ್ಯಾಧಿಕಾರಿಗಳ ಸಂಘವು ಸಿಜಿಎಚ್‌ಸಿ ಮಾದರಿಯಲ್ಲಿ ಭತ್ಯೆ ಪರಿಷ್ಕರಿಸುವಂತೆ ಕೋರಿತ್ತು. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸಭೆ ನಡೆಸಿ ಈ ಕುರಿತು ಚರ್ಚೆ ನಡೆಸಿದ್ದರು.

## ಹರಪನಹಳ್ಳಿಯಲ್ಲಿಂದು ರಕ್ತದಾನ ಶಿಬಿರ

ಸಂಪೂರ್ಣ ಸುವಾರ್ತೆ ಚರ್ಚ್ ಸಾರ್ವಜನಿಕ ಆಸ್ಪತ್ರೆ ಎದುರುಗಡೆ ಇಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಯಲಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ, ಸಂಪೂರ್ಣ ಸುವಾರ್ತೆ ಚರ್ಚ್, ಸ್ವಾಮಿ ವಿವೇಕಾನಂದ ರಕ್ತ ಭಂಡಾರ (ಹಗರಿಬೊಮ್ಮನಹಳ್ಳಿ) ಇವರುಗಳ ಸಂಯುಕ್ತ ಆಶ್ರಯದಲ್ಲಿ ಈ ಶಿಬಿರ ಏರ್ಪಡಾ ಗಿದೆ ಎಂದು ಸುವಾರ್ತೆ ಚರ್ಚ್‌ನ ಫಾದರ್ ನೀಲ್ ಆರ್ಮ್‌ಸ್ಟ್ರಾಂಗ್ ತಿಳಿಸಿದ್ದಾರೆ.

## ಸಿಎಂಗೆ ಕೇಸ್ ಕಂಟಕ

**(1ನೇ ಪುಟದಿಂದ)** ಸಹ ರದ್ದು ಮಾಡಬೇಕೆಂದು ಯಡಿಯೂರಪ್ಪ ಅವರು ಜನವರಿ 30, 2019ರಲ್ಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

## ಜಗಳೂರು ತಾ. ಗ್ರಾ.ಪಂ. ಚುನಾವಣೆ; 219 ಬೂತ್‌ಗಳಲ್ಲಿ ಮತದಾನ

ಜಗಳೂರು, ಡಿ.22- ತಾಲ್ಲೂಕಿನ 21 ಗ್ರಾಮ ಪಂಚಾಯಿತಿಗಳ 45 ಸೂಕ್ಷ್ಮ ಮತ್ತು 16 ಅತಿಸೂಕ್ಷ್ಮ ಮತಗಟ್ಟೆಗಳೂ ಸೇರಿದಂತೆ, ಒಟ್ಟು 219 ಬೂತ್‌ಗಳಲ್ಲಿ ಶಾಂತಿಯುತ ಮತದಾನ ನಡೆಯಿತು.

ಒಟ್ಟು 22 ಗ್ರಾಮ ಪಂಚಾಯಿತಿಗಳಲ್ಲಿ 397 ಸ್ಥಾನಗಳಿಗೆ ನಡೆಯಬೇಕಿದ್ದ ಚುನಾವಣೆ ಬಿದರಕೆರೆ ಗ್ರಾಮ ಪಂಚಾಯಿತಿ ಸಂಪೂರ್ಣ 16 ಸ್ಥಾನಗಳಿಗೆ ಅವಿ ರೋಧವಾಗಿ ಆಯ್ಕೆ ಯಾಗಿವೆ. ಉಳಿದಂತೆ 100 ಸ್ಥಾನಗಳು ಅವಿರೋಧ ಆಯ್ಕೆ ಯಾದ ಹಿನ್ನೆಲೆಯಲ್ಲಿ 21 ಗ್ರಾಮ ಪಂಚಾಯಿತಿ ವ್ಯಾಪ್ತಿಯ 297 ಸ್ಥಾನಗಳಿಗೆ ಚುನಾವಣೆ ನಡೆಯಿತು. ಕಣದಲ್ಲಿ 744 ಅಭ್ಯರ್ಥಿಗಳಿದ್ದಾರೆ. ಇದೇ ದಿನಾಂಕ 30 ರಂದು ಸರ್ಕಾರಿ ಪ.ಪೂ. ಕಾಲೇಜಿನಲ್ಲಿ ಮತಗಳ ಎಣಿಕೆ ನಡೆಯಲಿದೆ.

## ಯುವಜನೋತ್ಸವ ಸ್ಪರ್ಧೆ ಮುಂದಕ್ಕೆ

ದಾವಣಗೆರೆ, ಡಿ.22- ಕ್ರೀಡಾ ವಸತಿ ನಿಲಯದಲ್ಲಿ ನಾಡಿದ್ದು ದಿನಾಂಕ 24 ರಂದು ನಡೆಯಬೇಕಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಸ್ಪರ್ಧೆಗಳನ್ನು ಮುಂದೂಡಲಾಗಿದೆ. ವಿವರಗಳಿಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ದೂರವಾಣಿ 08192-237480) ಯನ್ನು ಸಂಪರ್ಕಿಸಬಹುದೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಶ್ರೀನಿವಾಸ್ ತಿಳಿಸಿದ್ದಾರೆ.


ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಧರ್ಮಶಾಲಾ ಅಸೋಸಿಯೇಷನ್,
ಪೂನಾ - ಬೆಂಗಳೂರು ರಸ್ತೆ, ದಾವಣಗೆರೆ-577002.

**ಮಳಿಗೆಗಳು ಬಾಡಿಗೆಗೆ**

ಹದಡಿ ರಸ್ತೆಯ ನಮ್ಮ ಧರ್ಮಶಾಲೆಯ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಮಳಿಗೆಗಳಲ್ಲಿ 3 (ಮೂರು) ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಆಸಕ್ತರು ಧರ್ಮಶಾಲೆಯ "**ಹನುಮಂತಪ್ಪನವರ ಕಟ್ಟಡ**" ದಲ್ಲಿರುವ ಆಡಳಿತ ಕಛೇರಿಯನ್ನು ಸಂಪರ್ಕಿಸಿ ರೂ.100/- ಶುಲ್ಕ ಸಲ್ಲಿಸಿ ಟೆಂಡರ್ ಫಾರಂ ಪಡೆದು ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ : 31-12-2020**ರೊಳಗಾಗಿ ಕಛೇರಿಗೆ ತಲುಪಿಸಬೇಕು.

**ದೂರವಾಣಿ ಸಂಖ್ಯೆ : (08192) 258834/258836**


## ರಾಣೇಬೆನ್ನೂರು ಶಾಸಕ ಅರುಣಕುಮಾರ್‌ರಿಂದ ಮತದಾನ



ರಾಣೇಬೆನ್ನೂರು, ಡಿ.22- ಇಂದು ನಡೆದ ಗ್ರಾಮ ಪಂಚಾಯ್ತಿ ಚುನಾವಣೆ ನಿಮಿತ್ತ ತಾಲ್ಲೂಕಿನ ಕೋಡಿಯಾಲ ಹೊಸಪೇಟೆಯಲ್ಲಿ ಶಾಸಕ ಅರುಣಕುಮಾರ ಪೂಜಾರ ಹಾಗೂ ಅವರ ಧರ್ಮಪತ್ನಿಯೂ ಆಗಿರುವ ಜಿ.ಪಂ. ಸದಸ್ಯೆ ಶ್ರೀಮತಿ ಮಂಗಳಗೌರಿ ಪೂಜಾರ ದಂಪತಿ ಮತ ಚಲಾಯಿಸಿದರು.

## ಹರಿಹರ ತಾ. ಶಿಕ್ಷಕರ ಸಂಘಕ್ಕೆ ಆಯ್ಕೆ





ಮಲೇಬೆನ್ನೂರು, ಡಿ.22- ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹರಿಹರ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಧೂಳೆಹೊಳೆ ಸ.ಹಿ. ಪ್ರಾ. ಶಾಲೆಯ ಶಿಕ್ಷಕ ಶರಣಕುಮಾರ್ ಹೆಗಡೆ, ಖಜಾಂಚಿಯಾಗಿ ಹಳ್ಳಿಹಾಳ್ ಸ.ಹಿ.ಪ್ರಾ. ಶಾಲೆಯ ಶಿಕ್ಷಕಿ ಶ್ರೀಮತಿ ವಿನೋದ ಅವರು ಆಯ್ಕೆಯಾಗಿದ್ದಾರೆ.

## ರಾಜ್ಯ ಮಟ್ಟದ ಕವಿಗೋಷ್ಠಿ

ದಾವಣಗೆರೆ, ಡಿ.22- ವಿಶ್ವ ವೀರಶೈವ ಲಿಂಗಾಯತ ಏಕೀಕ ರಣ ಪರಿಷತ್ ವತಿಯಿಂದ ರಾಜ್ಯ ಮಟ್ಟದ ಕವಿಗೋಷ್ಠಿಯು ಇದೇ ದಿನಾಂಕ 27 ರಂದು ನಗರದ ರೋಟರಿ ಬಾಲ ಭವನ ದಲ್ಲಿ ನಡೆಯಲಿದೆ. ಕೊರೊನಾ ನಮ್ಮ ಜೀವನದಲ್ಲಿ ತಂದ ಬದ ಲಾವಣೆ ಕುರಿತಾಗಿ 20 ರಿಂದ 24 ಸಾಲುಗಳ ಕವನವನ್ನು ನಾಳೆ ದಿನಾಂಕ 23 ರ ರಾತ್ರಿ 12 ರೊಳಗೆ ನೋಂದಾಯಿಸಿಕೊ ಳ್ಳಲು ಸಾಹಿತಿ ರೇವಣ್ಣ ಬಳ್ಳಾರಿ (9448339322) ತಿಳಿಸಿ ದ್ದಾರೆ. ನೋಂದಾಯಿಸಿ ಕೊಂಡವರು ಕಾರ್ಯಕ್ರಮ ದಂದು ಬೆಳಿಗ್ಗೆ 10.30 ರೊಳಗೆ ಹಾಜರಾಗುವಂತೆ ತಿಳಿಸಿದ್ದಾರೆ.


**ಹೃತ್ಪೂರ್ವಕ ಧನ್ಯವಾದಗಳು**

**ದೊಡ್ಡಬಾತಿ ಗ್ರಾಮ ಪಂಚಾಯ್ತಿ ಚುನಾವಣೆ - 2020**

ವಾರ್ಡ್ ನಂ. 1 ರಲ್ಲಿ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಮಗೆ ಮತ ನೀಡಿದ ಮತದಾರರಿಗೆ, ಚುನಾವಣಾ ಸಂದರ್ಭದಲ್ಲಿ ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಮುಖಂಡರಿಗೆ, ಕಾರ್ಯಕರ್ತರಿಗೆ, ಹಿತೈಷಿಗಳಿಗೆ, ಅಭಿಮಾನಿಗಳಿಗೆ, ಗುರು-ಹಿರಿಯರಿಗೆ ಹಾಗೂ 1ನೇ ವಾರ್ಡಿನ ಎಲ್ಲಾ ಮತ ಬಾಂಧವರಿಗೆ ಹೃದಯಪೂರ್ವಕ ಧನ್ಯವಾದ ಅರ್ಪಿಸುತ್ತೇವೆ.

ಇಂತಿ ತಮ್ಮ ಸೇವಾಕಾಂಕ್ಷಿಗಳು


ಬಿ.ಜಿ. ವಿಶ್ವಂಬರ


ಬಂಗಾರಮ್ಮ ಕೋಂ ರಾಜಪ್ಪ


ಪಿ. ಶ್ರೀಧರ


ಕೆ.ಟಿ. ಸಿದ್ದೇಶ್



ತಬಲೀಗ್ ಉಲ್ ಇಸ್ಲಾಂ ಟ್ರಸ್ಟ್ (ರಿ)
**ಮಸ್ಜೀದ್-ಎ-ಖುದದಾದ್,**
**ಭಗತ್‌ಸಿಂಗ್ ನಗರ, ದಾವಣಗೆರೆ.**

**ಸಾರ್ವಜನಿಕರ ತಿಳುವಳಿಕೆಗಾಗಿ**

ಸದರಿ ಟ್ರಸ್ಟಿನ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ದಾವಣಗೆರೆ ತಾಲ್ಲೂಕು ನಿಟುವಳ್ಳಿ ಗ್ರಾಮ ಪಂಚಾಯಿತಿಯ ಖಾನಂ 679ಬಿ ರಲ್ಲಿನ ಪ್ಲಾನಿನಲ್ಲಿ ಕಂಡಂತೆ, ಹಾಲಿ ದಾವಣಗೆರೆ ಸಿಟಿ, ಭಗತ್‌ಸಿಂಗ್ ನಗರದ 2ನೇ ಮೇನ್, 8ನೇ ಕ್ರಾಸ್ ಆದಿಯಲ್ಲಿ ದೊಡ್ಡ ಚರಂಡಿ ಪಕ್ಕ ಬರತಕ್ಕ ಸೈಟ್ ನಂ. 98 ಮತ್ತು 99 ಈ ಎರಡು ಸೈಟುಗಳು ಒಂದಕ್ಕೊಂದು ಲಗತ್ತಾಗಿದ್ದು ಒಟ್ಟು ಅಳತೆ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ : ಪೂರ್ವದ ಕಡೆ 32 ಅಡಿ, ಪಶ್ಚಿಮದ ಕಡೆ 48 ಅಡಿವುಳ್ಳ ಖಾಲಿ ಜಾಗ, ಈ ಹಿಂದೆ ದಿನಾಂಕ 14.12.1984ರ ನೋಂದಾಯಿತ ದಾನ ಪತ್ರದ ಮೂಲಕ , ಮಸ್ಜೀದ್-ಎ-ಖುದದಾದ್‌ನ ಟ್ರಸ್ಟ್‌ಗೆ ರಿಜಿಸ್ಟರ್ ಆಗಿದ್ದು, ಸದರಿ ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುತ್ತದೆ. ಕೆಲವರು ಸದರಿ ಸೊತ್ತನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬಂದಿರುತ್ತದೆ. ಆದ್ದರಿಂದ ಸದರಿ ಸೊತ್ತನ್ನು ಅನ್ಯರು ಮಾರಾಟ ಮಾಡುವುದಾಗಲಿ, ಖರೀದಿಸುವುದಾಗಲಿ ಕಾನೂನು ಬಾಹಿರವಾಗಿರುತ್ತದೆ. ಯಾರೂ ಆಮಿಷಕ್ಕೆ ಒಳಗಾಗಿ ಈ ಸೊತ್ತಿನ ಬಗ್ಗೆ ವ್ಯವಹರಿಸಬಾರದೆಂದು ಎಚ್ಚರಿಸಿದೆ. ಈ ಪ್ರಕಟಣೆ ಕೊಟ್ಟಾಗ್ಯೂ ಸಾರ್ವಜನಿಕರು ಹಕ್ಕು ಇಲ್ಲದ ವ್ಯಕ್ತಿಗಳೊಡನೆ ವ್ಯವಹರಿಸಿದ್ದೇ ಆದಲ್ಲಿ ಮುಂದೆ ಅವರಿಗಾಗುವ ಲುಕ್ಸಾನ್ ಮತ್ತು ತೊಂದರೆಗಳಿಗೆ ಅವರವರೇ ಜವಾಬ್ದಾರರಾಗುತ್ತಾರೆ ಎಂದು ತಿಳಿಯುವುದು ಹಾಗೂ ಅಂತಹವರ ಮೇಲೆ ಕಾನೂನು ರೀತ್ಯ ಘನ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು ಹಾಗೂ ಮುಂದಿನ ಆಗು-ಹೋಗುಗಳಿಗೆ, ನಷ್ಟಕ್ಕೆ ಅವರವರೆ ಹೊಣೆಗಾರರೆಂದು ಈ ಪ್ರಕಟಣೆ ಮೂಲಕ ತಿಳುವಳಿಕೆ ನೀಡಲಾಗಿದೆ.

ಸಹಿ/- **ಕಾರ್ಯದರ್ಶಿ**
ಮಸ್ಜೀದ್-ಎ-ಖುದದಾದ್‌ನ ಟ್ರಸ್ಟ್ ಪರವಾಗಿ



**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪ್. ಸೊಸೈಟಿ ನಿ.,**
ಆಡಳಿತ ಕಛೇರಿ: ಹದಡಿ ರಸ್ತೆ, ದಾವಣಗೆರೆ-577 002
ಫೋನ್: 08192- 252222, 231870 . ಶಾಖೆ: ವಿದ್ಯಾನಗರ, ದಾವಣಗೆರೆ. ಫೋನ್:08192-262392

**26ನೇ ವಾರ್ಷಿಕ ಮಹಾಸಭೆಯ ನೋಟೀಸು**

ನಮ್ಮ ಸಹಕಾರ ಸಂಘದ **2019-20ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 24-12-2020ರ ಗುರುವಾರ** ಬೆಳಿಗ್ಗೆ 10.30ಕ್ಕೆ **ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕುವೆಂಪು ಕನ್ನಡ ಭವನ,** ವಿದ್ಯಾನಗರ ಕೆನರಾ ಬ್ಯಾಂಕ್ ಹತ್ತಿರ, ವಿದ್ಯಾನಗರ, ದಾವಣಗೆರೆ ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಆರ್. ವೆಂಕಟರೆಡ್ಡಿ** ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದ ಕಾರಣ ಮಾನ್ಯ ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಬೇಕೆಂದು ವಿನಂತಿ.

| ಕ್ರ.ಸಂ. | ವಿವರ | 2017-18 | 2018-19 | 2019-20 |
|---|---|---|---|---|
| 1 | ಸದಸ್ಯರ ಸಂಖ್ಯೆ | 2448 | 2734 | 2719 |
| 2 | ಷೇರು ಬಂಡವಾಳ | 1,13,36,700-00 | 1,21,28,700-00 | 1,17,25,700-00 |
| 3 | ಠೇವಣಿಗಳು | 10,52,40,496-00 | 12,12,60,714-00 | 12,95,98,352-00 |
| 4 | ಸಾಲಗಳು | 10,97,25,732-00 | 10,65,79,605-00 | 13,32,66,056-00 |
| 5 | ದುಡಿಯುವ ಬಂಡವಾಳ | 16,68,45,524-00 | 18,68,40,175-00 | 19,37,20,463-00 |
| 6 | ನಿವ್ವಳ ಲಾಭ | 26,90,870-00 | 28,50,261-00 | 23,62,041-00 |
| 7 | ಹೂಡಿಕೆಗಳು | 3,03,61,476-00 | 5,88,03,319-00 | 3,93,53,181-00 |
| 8 | ಲಾಭಾಂಶ ನೀಡಿಕೆ | 14% | 14% | ಉದ್ದೇಶಿತ 10 % |

ಕಾರ್ಯಕಾರಿ ಮಂಡಲಿಯ ಅಪ್ಪಣೆ ಮೇರೆಗೆ
**ಶ್ರೀ ಆರ್. ವೆಂಕಟರೆಡ್ಡಿ, ಅಧ್ಯಕ್ಷರು**

**ಸೂಚನೆ :**

(1) 2019-2020ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ತಂದಿರುವ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸುಸ್ತಿದಾರರಲ್ಲದ ಸದಸ್ಯರು ಕನಿಷ್ಟ 5 ದಿವಸಗಳ ಮುಂಚಿತವಾಗಿ ಲಿಖಿತ ಮೂಲಕ ತಿಳಿಸಿದಲ್ಲಿ ಅಧ್ಯಕ್ಷರ ಅನುಮತಿಯಿಂದ ಇಂತಹ ವಿಷಯಗಳನ್ನು ಚರ್ಚಿಸಲು ಅವಕಾಶ ಇರುತ್ತದೆ. ಅಧ್ಯಕ್ಷರ ಪೂರ್ವಾನುಮತಿ ಪಡೆಯದೇ ಪ್ರಶ್ನೆಗಳನ್ನು ಕೇಳಿದಲ್ಲಿ ಅಂತಹ ಪ್ರಶ್ನೆಗಳನ್ನು ಚರ್ಚಿಸುವ ಅವಕಾಶ ಇರುವುದಿಲ್ಲ. (2) ಸದಸ್ಯರುಗಳು ಮಹಾಸಭೆಗೆ ಆಗಮಿಸುವಾಗ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಮತ್ತು ಸಂಘದ ಗುರುತಿನ ಚೀಟಿ ತಪ್ಪದೇ ಕಡ್ಡಾಯವಾಗಿ ತರಬೇಕಾಗಿ ವಿನಂತಿ.

ವಿಶೇಷ ಸೂಚನೆ : 1. ಮಾಸ್ಕ್ ಧರಿಸುವುದು ಕಡ್ಡಾಯವಾಗಿರುತ್ತದೆ. 2. ಸದಸ್ಯರು ಸಭೆಯಲ್ಲಿ ಸಾಮಾಜಿಕ ಅಂತರ ಕಾಪಾಡತಕ್ಕದ್ದು.



**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ**
ದೊಡ್ಡಬಾತಿ, ದಾವಣಗೆರೆ ಜಿಲ್ಲೆ

**ಪತ್ರಿಕಾ ಪ್ರಕಟಣೆ**

**ಕಾರ್ಖಾನೆಯ 2019-20ನೇ ಸಾಲಿನ 51ನೇ ವಾರ್ಷಿಕ ಮಹಾಸಭೆಯ ನೋಟಿಸ್**

**ಕಾರ್ಖಾನೆಯ ಷೇರುದಾರರ ಗಮನಕ್ಕೆ**

ಈ ಮೂಲಕ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ ಕಾರ್ಖಾನೆಯ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್-19 ವೈರಸ್ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದ ಪ್ರಕಾರ ಕಾರ್ಖಾನೆಯ ಸದಸ್ಯರ ಸುರಕ್ಷತೆಯ ಹಿತದೃಷ್ಟಿಯಿಂದ ಕಾರ್ಖಾನೆಯ **ವಾರ್ಷಿಕ ಮಹಾಸಭೆಯನ್ನು** ವೀಡಿಯೋ ಕಾನ್ಫರೆನ್ಸ್ / ವರ್ಚ್ಯುಲ್ ಮೂಲಕ **ದಿನಾಂಕ 24.12.2020 ರಂದು ಗುರುವಾರ ಬೆಳಿಗ್ಗೆ 11.30 ಗಂಟೆಗೆ ಕಾರ್ಖಾನೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಹೆಚ್.ಎಸ್. ಶಿವಶಂಕರ್‌ರವರು,** ಮಾಜಿ ಶಾಸಕರು ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿರುತ್ತದೆ. ಈಗಾಗಲೇ ವಾರ್ಷಿಕ ಮಹಾಸಭೆ ನೋಟಿಸ್‌ನಲ್ಲಿ ಮೊಬೈಲ್ ಲಿಂಕ್‌ನ್ನು ಕಳುಹಿಸಲಾಗಿರುತ್ತದೆ. ದಿನಾಂಕ 24.12.2020ರಂದು ನಿಮ್ಮ ಮೊಬೈಲ್‌ನಿಂದ **"https://zoom.us/j/9325276981"** ಲಿಂಕ್ ಅನ್ನು ಒತ್ತುವುದರ ಮೂಲಕ ತಮ್ಮ ಷೇರು ಖಾತೆ ಸಂಖ್ಯೆಯನ್ನು ನಮೂದಿಸಿ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ ವಿಡೀಯೋ ಕಾನ್ಫರೆನ್ಸ್ / ವರ್ಚ್ಯುಲ್ ಮೂಲಕ ಎಲ್ಲರೂ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ವಿನಂತಿಸಲಾಗಿದೆ. ಹಾಗೂ ಈ ವೆಬ್ ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ವಾರ್ಷಿಕ ಮಹಾಸಭೆಯ ಹಾಜರಾತಿ ಎಂದು ಪರಿಗಣಿಸಲಾಗುವುದು.

ಸಹಿ/- **ಬಿ. ಜಯಪ್ರಕಾಶ್**
ವ್ಯವಸ್ಥಾಪಕ ನಿರ್ದೇಶಕರು

ಸಹಿ/- **ಹೆಚ್.ಎಸ್. ಶಿವಶಂಕರ್**
ಅಧ್ಯಕ್ಷರು ಹಾಗೂ ಮಾಜಿ ಶಾಸಕರು



UDAY SUPER BAZAAR
Hadadi Road, Vani Rice Mill Compound, Davanagere-577005
Mob : 99869 64634, 97428 10033

**Chirstmas Offer**

Exclusive sales with Upto 50% off.
Shop for our Latest Collection

Fashion Upto 50% off
Footwear Flat 30% off
Utencils Upto 50% off
Food Products Upto 5% off
Non Food Products Upto 10% off

Shop Rs 3000/- & above Get worth Rs 400/- gift Vouher on Fashion & Footwear & 2 KG Rice Absolutely Free.

New Launch- MODICARE PRODUCTS
Offer Valid Till 27th December 2020.....

# ಮಂದಿರ ನಿಧಿ ಸಂಗ್ರಹಣೆಗೆ 5 ಲಕ್ಷ ಸ್ವಯಂ ಸೇವಕರು

**27,500 ಹಳ್ಳಿಗಳಿಗೆ ತೆರಳಿ ನಿಧಿ ಸಮರ್ಪಣೆ ಸ್ವೀಕಾರ**

ಬೆಂಗಳೂರು, ಡಿ. 22 - ಅಯೋಧ್ಯೆಯ ಭವ್ಯ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಮನೆ ಮನೆಗೆ ತೆರಳಿ ನಿಧಿ ಸಂಗ್ರಹಿಸಲು ವಿಶ್ವ ಹಿಂದೂ ಪರಿಷತ್ ಐದು ಲಕ್ಷ ಕಾರ್ಯಕರ್ತರ ಜೊತೆ ಕೈ ಜೋಡಿಸಲಿದೆ ಎಂದು ಸಂಘಟನೆಯ ಅಂತರರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ತಲಾ ಐದು ಸದಸ್ಯರನ್ನು ಒಳಗೊಂಡ ಒಂದು ಲಕ್ಷ ಸ್ವಯಂ ಸೇವಕರ ಗುಂಪುಗಳನ್ನು ನಾವು ರಚಿಸಲಿದ್ದೇವೆ. ಇವರು ರಾಜ್ಯದ 27,500 ಹಳ್ಳಿಗಳಿಗೆ ತೆರಳಿ 90 ಲಕ್ಷ ಭಕ್ತರಿಂದ ನಿಧಿ ಸಮರ್ಪಣೆ ಪಡೆಯಲಿದ್ದಾರೆ ಎಂದು ಹೇಳಿದ್ದಾರೆ.

ನಿಧಿ ಸಂಗ್ರಹಣೆ ಅಭಿಯಾನದ ಉಸ್ತುವಾರಿಗಾಗಿ ರಾಜ್ಯದಲ್ಲಿ ಶ್ರೀ ರಾಮ ಮಂದಿರ ನಿಧಿ ಸಮರ್ಪಣಾ ಅಭಿಯಾನ ಸಮಿತಿ ರಚಿಸಲಾಗುವುದು ಎಂದವರು ಹೇಳಿದ್ದಾರೆ.

ಕರ್ನಾಟಕದ ಸಮಿತಿಗೆ ಆರ್.ಎಸ್.ಎಸ್. ಪದಾಧಿಕಾರಿ ಎನ್. ತಿಪ್ಪೇಸ್ವಾಮಿ ಕಾರ್ಯದರ್ಶಿಯಾಗಲಿದ್ದಾರೆ. ಸಮಿತಿಗೆ ಸ್ವಾಮೀಜಿಗಳು ಮಾರ್ಗದರ್ಶನ ಮಾಡಲಿದ್ದಾರೆ. 10 ರೂ., 100 ರೂ. ಹಾಗೂ 1,000 ರೂ.ಗಳ ಕೂಪನ್ ಮೂಲಕ ನಿಧಿ ಸಂಗ್ರಹಿಸಲಾಗುವುದು. 2 ಸಾವಿರ ರೂ.ಗಳಿಗೂ ಹೆಚ್ಚು ದೇಣಿಗೆ ನೀಡುವವರಿಗೆ ರಸೀದಿ ನೀಡಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆ ಕಾಯ್ದೆಯಲ್ಲಿ ವಿನಾಯಿತಿ ಇದೆ ಎಂದು ಕುಮಾರ್ ಹೇಳಿದ್ದಾರೆ.

ಸ್ವಯಂ ಸೇವಕರು ಸಂಗ್ರಹಿಸಿದ ಹಣವನ್ನು ಠೇವಣಿದಾರರಿಗೆ ನೀಡಲಿದ್ದಾರೆ. ಅವರು 48 ಗಂಟೆಗಳ ಒಳಗೆ ನಿಯೋಜಿತ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಿದ್ದಾರೆ. ಪ್ರತಿಯೊಬ್ಬ ಠೇವಣಿದಾರನಿಗೂ ಎಸ್.ಬಿ.ಐ., ಬ್ಯಾಂಕ್ ಆಫ್ ಬರೋಡಾ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳಲ್ಲಿ ನೋಂದಾಯಿತ ಕೋಡ್ ಸಂಖ್ಯೆ ನೀಡಲಾಗುವುದು ಎಂದು ಹೇಳಿದ್ದಾರೆ.

## ವೈಕುಂಠ ಏಕಾದಶಿ ಪ್ರವೇಶ ನಿಷೇಧ



ದಾವಣಗೆರೆ,ಡಿ.22- ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಇದೇ ದಿನಾಂಕ 25 ರಂದು ವೈಕುಂಠ ಏಕಾದಶಿ ಮಹೋತ್ಸವ ಜರುಗಲಿದೆ. ಕೋವಿಡ್ ಹಿನ್ನೆಲೆಯಲ್ಲಿ ಪ್ರವೇಶ ನಿಷಿದ್ಧಗೊಳಿಸಿದ್ದು, ಭಕ್ತಾದಿಗಳು ಸಹಕರಿಸುವಂತೆ ದೇವಸ್ಥಾನದ ಟ್ರಸ್ಟಿ ತಿಳಿಸಿದ್ದಾರೆ.

# ಅಭಯ ಹತ್ಯೆ : ಕೇರಳದ ಪಾದ್ರಿ, ಸಿಸ್ಟರ್ ತಪ್ಪಿತಸ್ಥರು

**28 ವರ್ಷಗಳ ನಂತರ ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪು**

ತಿರುವನಂತಪುರಂ, ಡಿ. 22 - ಕೇರಳದ ಕೊಟ್ಟಾಯಂನ ಸೇಂಟ್ ಪಯಸ್ ಕಾನ್ವೆಂಟ್‌ನಲ್ಲಿ ಸಿಸ್ಟರ್ ಅಭಯ ಅವರ ನಿಗೂಢ ಹತ್ಯೆ ನಡೆದ ಇಪ್ಪತ್ತೆಂಟು ವರ್ಷಗಳ ನಂತರ ಪಾದ್ರಿ ಹಾಗೂ ಸನ್ಯಾಸಿನಿ ತಪ್ಪಿತಸ್ಥರು ಎಂದು ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

ವಿಶೇಷ ಸಿಬಿಐ ನ್ಯಾಯಮೂರ್ತಿ ಕೆ.ಸನಲ್ ಕುಮಾರ್ ಅವರು ಪ್ರಕರಣದ ತೀರ್ಪು ನೀಡಿದ್ದು, ಉಭಯರ ವಿರುದ್ಧದ ಹತ್ಯೆ ಆರೋಪ ಸಾಬೀತಾಗಿದೆ ಎಂದು ತಿಳಿಸಿದ್ದಾರೆ.

ಕ್ಯಾಥೊಲಿಕ್ ಚರ್ಚ್‌ನ ಫಾದರ್ ಥಾಮಸ್ ಕೊಟ್ಟೂರ್ ಹಾಗೂ ಸಿಸ್ಟರ್ ಸೆಫ್ ಹತ್ಯೆ ನಡೆಸಿದ್ದಾರೆ ಹಾಗೂ ಸಾಕ್ಷಿಗಳನ್ನು ತಿರುಚಿದ್ದಾರೆ ಎಂದು ನ್ಯಾಯಾಲಯ ತಿಳಿಸಿದೆ. ಬುಧವಾರ ಶಿಕ್ಷೆಯ ಪ್ರಮಾಣ ಪ್ರಕಟಿಸಲಾಗುವುದು.

ಮಾರ್ಚ್ 27, 1992ರಂದು ಅಭಯ ಅವರ ಮೃತದೇಹ ಸೇಂಟ್ ಪಯಸ್ ಕಾನ್ವೆಂಟ್‌ನ ಬಾವಿಯಲ್ಲಿ ಪತ್ತೆಯಾಗಿತ್ತು. ಅಭಯ ಅವರು ಕೊಟ್ಟಾಯಂ ಬಿ.ಸಿ.ಎಂ. ಕಾಲೇಜಿನ ಎರಡನೇ ವರ್ಷದ ವಿದ್ಯಾರ್ಥಿನಿಯಾಗಿದ್ದರು.

ಸಾಕ್ಷಿಗಳ ಕೊರತೆಯಿಂದಾಗಿ ಇನ್ನೋರ್ವ ಆರೋಪಿ ಫಾದರ್ ಜೋಸೆ ಪುತ್ರಿಕ್ಕಯಿಲ್ ಅವರನ್ನು ಪ್ರಕರಣದಿಂದ ಮುಕ್ತಗೊಳಿಸಲಾಗಿತ್ತು.

ಇದಕ್ಕೂ ಮುಂಚೆ ತನಿಖೆ ನಡೆಸಿದ್ದ ಸ್ಥಳೀಯ ಪೊಲೀಸರು ಹಾಗೂ ರಾಜ್ಯ ಅಪರಾಧ ದಳ ಅಭಯ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ವರದಿ ನೀಡಿದ್ದವು.

ಮಾರ್ಚ್ 29, 1993ರಲ್ಲಿ ಸಿಬಿಐ ತನಿಖೆ ನಡೆಸಿ, ಇದು ಹತ್ಯೆ ಪ್ರಕರಣವಾದರೂ ಅಪರಾಧಿಗಳು ಪತ್ತೆಯಾಗಿಲ್ಲ ಎಂದು ತಿಳಿಸಿತ್ತು.

ನಂತರ 2008ರಲ್ಲಿ ಸಿಬಿಐ ಪ್ರಕರಣ ನಿರ್ವಹಿಸಿದ ರೀತಿಯನ್ನು ಹೈಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡು, ಪ್ರಕರಣವನ್ನು ದೆಹಲಿ ಘಟಕದಿಂದ ಕೊಚ್ಚಿ ಘಟಕಕ್ಕೆ ವರ್ಗಾಯಿಸುವಂತೆ ತಿಳಿಸಿತ್ತು.

ನಂತರದಲ್ಲಿ ಇಬ್ಬರು ಪಾದ್ರಿಗಳಾದ ಥಾಮಸ್ ಕೊಟ್ಟೂರ್, ಜೋಸೆ ಪುತ್ರಿಕ್ಕಾಯಿಲ್ ಹಾಗೂ ಸಿಸ್ಟರ್ ಸೆಫಿ ಅವರನ್ನು ಬಂಧಿಸಲಾಗಿತ್ತು.

ಕೊಟ್ಟೂರ್ ಹಾಗೂ ಪೊತ್ರಿಕ್ಕಾಯಿಲ್ ಅಕ್ರಮ ಸಂಬಂಧ ಹೊಂದಿದ್ದರು.

ಇದನ್ನು ಅಭಯ ನೋಡಿದ್ದರು. ನಂತರ ಪಾದ್ರಿ ಹಾಗೂ ಸಿಸ್ಟರ್ ಸೇರಿಕೊಂಡು ಕೊಡಲಿಯಿಂದ ಅಭಯ ಹತ್ಯೆ ಮಾಡಿ, ಮೃತದೇಹವನ್ನು ಬಾವಿಗೆ ಎಸೆದಿದ್ದರು ಎಂದು ಆರೋಪಿಸಲಾಗಿತ್ತು.

# 12ಕ್ಕೆ ನಗರ ದೇವತೆ ಕಾರ್ತಿಕೋತ್ಸವ



ದಾವಣಗೆರೆ,ಡಿ.22- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಬರುವ ಜನವರಿ 12ರ ಮಂಗಳವಾರ ಕಡೇ ಕಾರ್ತಿಕೋತ್ಸವ ಜರುಗಲಿದೆ ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

ಕಾರ್ತಿಕೋತ್ಸವದ ಸಂದರ್ಭದಲ್ಲಿ ಶ್ರೀ ದೇವಿಯ ದರ್ಶನಕ್ಕೆ ಆಗಮಿಸುವ ಭಕ್ತರಿಗೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ನಡೆಸಲಾಗುತ್ತಿದ್ದ ದಾಸೋಹವನ್ನು ಪುನರಾರಂಭಿಸಲಾಗುವುದು. ಕೋವಿಡ್ -19 ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ದಾಸೋಹವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಇದೀಗ ಜಿಲ್ಲಾಧಿಕಾರಿಗಳ ಅನುಮತಿ ಮೇರೆಗೆ ಮತ್ತು ದೇವಸ್ಥಾನ ಟ್ರಸ್ಟ್ ಗೌರವಾಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ನಿರ್ದೇಶನದ ಮೇರೆಗೆ ದಾಸೋಹವನ್ನು ಪುನರಾರಂಭಿಸಲು ತೀರ್ಮಾನ ಕೈಗೊಳ್ಳಲಾಗುವುದು ಎಂದು ಚನ್ನಬಸಪ್ಪ ವಿವರಿಸಿದ್ದಾರೆ.

## ಶ್ರೀಮತಿ ಸೂರಮ್ಮ ನಿಧನ



ಹೊಸ ಕುಂದುವಾಡ, ದಾವಣಗೆರೆ ತಾ।। ದಾವಣಗೆರೆ ಜಿಲ್ಲೆ।। ವಾಸಿಯಾದ ದಿ. ಬಳ್ಳಾರಿ ತಿಪ್ಪಣ್ಣನವರ ಧರ್ಮಪತ್ನಿ **ಶ್ರೀಮತಿ ಸೂರಮ್ಮ** (68) ಇವರು ದಿನಾಂಕ 22.12.2020ರ ಮಂಗಳವಾರ ಮಧ್ಯಾಹ್ನ 4.00 ಗಂಟೆಗೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 23.12.2020ರ ಬುಧವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖ ತಪ್ತ ಕುಟುಂಬ ವರ್ಗ

ಮಗ : ಶ್ರೀನಿವಾಸ ಮತ್ತು ಬಳ್ಳಾರಿ ವಂಶಸ್ಥರು ಹಾಗೂ ಬಂಧು-ಮಿತ್ರರು, ಹೊಸ ಕುಂದುವಾಡ

78295 57707, 91416 51561

# ಭಾರತಕ್ಕೆ ಬರದಂತೆ ಬ್ರಿಟನ್ ಪ್ರಧಾನಿಗೆ ರೈತರ ಆಗ್ರಹ

ನವದೆಹಲಿ, ಡಿ. 22 – ತಮ್ಮ ಬೇಡಿಕೆಗಳು ಈಡೇರುವವರೆಗೂ ಭಾರತಕ್ಕೆ ಬಾರದಂತೆ ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್‌ಗೆ ಪತ್ರ ಬರೆಯುವುದಾಗಿ ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರು ತಿಳಿಸಿದ್ದಾರೆ. ಬರುವ ಜನವರಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಬೋರಿಸ್ ಮುಖ್ಯ ಅತಿಥಿಯಾಗಿದ್ದಾರೆ.

ಜನವರಿ 26ಕ್ಕಾಗಿ ಬ್ರಿಟನ್ ಪ್ರಧಾನಿ ಭಾರತಕ್ಕೆ ಬರುವ ವೇಳಾಪಟ್ಟಿ ಇದೆ. ರೈತರ ಬೇಡಿಕೆಗಳನ್ನು ಭಾರತ ಸರ್ಕಾರ ಈಡೇರಿಸುವವರೆಗೂ ಅವರು ಭಾರತಕ್ಕೆ ಬರಬಾರದು ಎಂದು ನಾವು ಪತ್ರ ಬರೆಯುತ್ತೇವೆ ಎಂದು ಪಂಜಾಬ್ ರೈತ ನಾಯಕ ಕುಲ್ವಂತ್ ಸಿಂಗ್ ಸಂಧು ಹೇಳಿರುವುದಾಗಿ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

1993ರಲ್ಲಿ ಬ್ರಿಟನ್ ಪ್ರಧಾನಿಯಾಗಿದ್ದ ಜಾನ್ ಮೇಜರ್ ಅವರು ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಂಡ ನಂತರ, ಎರಡನೇ ಬಾರಿಗೆ ಬ್ರಿಟನ್ ಪ್ರಧಾನಿಯೊಬ್ಬರು ಗಣರಾಜ್ಯೋತ್ಸವಕ್ಕೆ ಆಗಮಿಸುತ್ತಿದ್ದಾರೆ.

# ಭಾರತದಿಂದ ಸಕ್ಕರೆ ಆಮದು ಕಡಿಮೆ ಮಾಡಲಿರುವ ಇರಾನ್

ನವದೆಹಲಿ, ಡಿ. 22- ದೇಶದಲ್ಲಿ ಸಕ್ಕರೆ ದಾಸ್ತಾನು ಹೆಚ್ಚಾಗಿರುವುದರಿಂದ, ರಫ್ತಿಗೆ ಕೇಂದ್ರ ಸರ್ಕಾರ ಉತ್ತೇಜನ ನೀಡುತ್ತಿದೆ. ಆದರೆ, ಕಳೆದ ಬಾರಿ ಅತಿ ದೊಡ್ಡ ಖರೀದಿದಾರ ದೇಶವಾಗಿದ್ದ ಇರಾನ್, ಈ ಬಾರಿ ಹೆಚ್ಚು ಸಕ್ಕರೆ ಆಮದು ಮಾಡಿಕೊಳ್ಳುವ ಸಾಧ್ಯತೆ ಇಲ್ಲ. ಹೆಚ್ಚುವರಿ ಸಕ್ಕರೆ ದಾಸ್ತಾನಿನಲ್ಲಿ 60 ಲಕ್ಷ ಟನ್ ಅನ್ನು ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.


2019-20ರಲ್ಲಿ ಇರಾನ್ ದಾಖಲೆಯ 11.4 ಲಕ್ಷ ಟನ್ ಸಕ್ಕರೆಯನ್ನು ಭಾರತದಿಂದ ಆಮದು ಮಾಡಿ ಕೊಂಡಿತ್ತು. ಈ ಬಾರಿ ಇರಾನ್ ಕೇವಲ 3ರಿಂದ 5 ಲಕ್ಷ ಟನ್ ಸಕ್ಕರೆ ಆಮದು ಮಾಡಿಕೊಳ್ಳಬಹುದು ಎಂದು ಮುಂಬೈನ ಜಾಗತಿಕ ವ್ಯಾಪಾರಿ ಉದ್ಯಮವೊಂದು ತಿಳಿಸಿದೆ.


## ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ

ನಂ. 657/1ಎ, ಮಂಡಿಪೇಟೆ, ದಾವಣಗೆರೆ. ದೂರವಾಣಿ : 08192-271537



ಲೋಕಿಕೆರೆ ಸಿದ್ದಪ್ಪ, ವಕೀಲರು
ಅಧ್ಯಕ್ಷರು



ಪಿ. ರಾಜ್‌ಕುಮಾರ್ ನಿರ್ದೇಶಕರು; ಹೆಚ್.ಜಿ. ಸಂಗಪ್ಪ ನಿರ್ದೇಶಕರು; ಕೆ.ಆರ್. ಭರಮಪ್ಪ ನಿರ್ದೇಶಕರು; ಕೆ.ಎನ್. ನೀಲಪ್ಪ ನಿರ್ದೇಶಕರು; ಬಿ. ದಿಳ್ಳೆಪ್ಪ ನಿರ್ದೇಶಕರು; ಆನಂದ್ ಆರ್. ವೃತ್ತಿಪರ ನಿರ್ದೇಶಕರು; ಪಿ. ಚೌಡಪ್ಪ ನಿರ್ದೇಶಕರು; ಹೆಚ್.ಎಂ. ಗೋಣೆಪ್ಪ ನಿರ್ದೇಶಕರು

ಎಸ್. ಸಂಗೇಗೌಡ ನಿರ್ದೇಶಕರು; ಕೆ. ಪರಶುರಾಮ್ ನಿರ್ದೇಶಕರು; ಕಾಂತೇಶ್ ಎಸ್.ಹೆಚ್. ನಿರ್ದೇಶಕರು; ಪ್ರಕಾಶ್ ಟಿ.ಎನ್. ನಿರ್ದೇಶಕರು; ಶ್ರೀಮತಿ ಕೆ. ಸುಧಾ ನಿರ್ದೇಶಕರು; ಪಿ. ಮಹಾದೇವಪ್ಪ ವಿಶೇಷ ಆಹ್ವಾನಿತರು; ಕೆ. ರೇವಣಸಿದ್ದಪ್ಪ ವಿಶೇಷ ಆಹ್ವಾನಿತರು; ಬಿ.ಎಲ್. ಗೌಡ್ರು ವ್ಯವಸ್ಥಾಪಕರು; ರಮೇಶ್ ದೇವಜ್ಜಿ ಲೆಕ್ಕಾಧಿಕಾರಿ/ಮಾರಾಟಾಧಿಕಾರಿ



ಕೆ.ಜಿ. ತಾಯಮ್ಮ
ಉಪಾಧ್ಯಕ್ಷರು

**ಸೂಚನೆ :**

1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ಸು ಬಂದಿರುತ್ತವೆ. ಆದಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಬೇಕು ಹಾಗೂ ಇದನ್ನು ಆಹ್ವಾನವೆಂದು ಭಾವಿಸಿ, ಮಹಾಸಭೆಯ ವಿಡಿಯೋ ಕಾನ್ಫರೆನ್ಸ್ / ವರ್ಚ್ಯುಯಲ್ ಮೀಟಿಂಗ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

2) ಬ್ಯಾಂಕಿನ 23ನೇ ವಾರ್ಷಿಕ ಮಹಾಸಭೆ ಇರುವುದರಿಂದ ದಿನಾಂಕ : 23-12-2020ರ ಬುಧವಾರದಂದು ಬ್ಯಾಂಕ್ ರಜೆ ಇರುತ್ತದೆ.

### 23ನೇ ವಾರ್ಷಿಕ ಮಹಾಸಭೆಯ ನೋಟೀಸ್

ನಮ್ಮ ಬ್ಯಾಂಕಿನ 2019-2020ನೇ ಸಾಲಿನ 23ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 23-12-2020ನೇ ಬುಧವಾರ ಬೆಳಿಗ್ಗೆ 11-00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕರೆಯಲಾಗಿದೆ. ಮಾನ್ಯ ಬ್ಯಾಂಕಿನ ಸರ್ವಸದಸ್ಯರು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿ ವಾರ್ಷಿಕ ಮಹಾಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ಸಭೆಯ ಕಾರ್ಯಕಲಾಪಗಳು**

(1) ಪ್ರಾರ್ಥನೆ (2) ಸ್ವಾಗತ (3) 23ನೇ ವಾರ್ಷಿಕ ಮಹಾಸಭೆಯ ವಿಷಯ ಸೂಚಿಯನ್ನು ಓದಿ ಅಂಗೀಕರಿಸುವುದು. (4) ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿಗಳು (5) ದಿನಾಂಕ 23.09.2019ರಂದು ನಡೆದ ಮಹಾಸಭೆಯ ನಿರ್ಣಯಗಳನ್ನು ಓದಿ ದೃಢೀಕರಿಸುವುದು. (6) ದಿನಾಂಕ 31.03.2020ಕ್ಕೆ ಅಂತ್ಯವಾಗುವ ವರ್ಷದ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಗಳನ್ನು ಪರಿಶೀಲಿಸಿ ಅಂಗೀಕರಿಸಿ, ನಿವ್ವಳ ಲಾಭದ ಹಂಚಿಕೆಗೆ ಮಂಜೂರಾತಿ ನೀಡುವುದು. (7) ಬ್ಯಾಂಕಿನ ಆಡಳಿತ ಮಂಡಳಿಯವರು ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು. (8) 2019-2020ನೇ ಆಯ-ವ್ಯಯದ ಅಂದಾಜಿಗಿಂತ ಹೆಚ್ಚುವರಿಯಾದ ಖರ್ಚುಗಳನ್ನು ಒಪ್ಪುವುದು ಮತ್ತು 2020-21ನೇ ಸಾಲಿಗೆ ಆಯ-ವ್ಯಯ (ಬಜೆಟ್)ವನ್ನು ಮಂಜೂರು ಮಾಡುವುದು. (9) 2019-20ನೇ ಸಾಲಿನ ಲೆಕ್ಕ ಪರಿಶೋಧನೆಗೆ ಶ್ರೀಯುತ ಟಿ. ತಾರಾನಾಥ್‌ರಾವ್, ಸನ್ನದು ಲೆಕ್ಕಪರಿಶೋಧಕರು ಇವರನ್ನು ನೇಮಿಸಿಕೊಂಡಿದ್ದನ್ನು ಅಂಗೀಕರಿಸುವುದು. (10) 2020-21ನೇ ಸಾಲಿಗೆ ಸನ್ನದು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು. (11) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು. (12) ವಂದನಾರ್ಪಣೆ

Download the Zoom app https://tinyurl.com/nx3qg82
and Register/Login for the meeting with the link
https://tinyurl.com/y7urbufw


ಲೋಕಿಕೆರೆ ಸಿದ್ದಪ್ಪ, ವಕೀಲರು ಅಧ್ಯಕ್ಷರು | ಕೆ.ಜಿ. ತಾಯಮ್ಮ ಉಪಾಧ್ಯಕ್ಷರು | ಬಿ.ಎಲ್. ಗೌಡ ವ್ಯವಸ್ಥಾಪಕರು | ರಮೇಶ್ ದೇವಜ್ಜಿ ಲೆಕ್ಕಾಧಿಕಾರಿ/ಮಾರಾಟಾಧಿಕಾರಿ

## ಶ್ರೀ ಮುರುಘರಾಜೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಲಿ.

#1058/3-4, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ-577 002. ಫೋನ್ : 08192 257901/255875, 230304,



ಎಂ. ಜಯಕುಮಾರ್
ಅಧ್ಯಕ್ಷರು



ಸೋಗಿ ಆರ್. ಶಿವಯೋಗಿ ನಿರ್ದೇಶಕರು; ಕೆ.ಆರ್. ಪರಮೇಶ್ವರಪ್ಪ ನಿರ್ದೇಶಕರು; ಹೆಚ್.ವಿ. ಮಂಜುನಾಥಸ್ವಾಮಿ ನಿರ್ದೇಶಕರು; ಕೆ.ಜಿ. ಚನ್ನಬಸಪ್ಪ ನಿರ್ದೇಶಕರು; ಎಂ.ಎಸ್. ಶಿವಯೋಗಿ ನಿರ್ದೇಶಕರು; ಶ್ರೀಮತಿ ಜ್ಯೋತಿ ಆರ್. ಜಂಬಗಿ ನಿರ್ದೇಶಕರು; ಎನ್. ನೀಲಗಿರಿ ನಿರ್ದೇಶಕರು

ಎಸ್.ವಿ. ರಾಮಚಂದ್ರಪ್ಪ ನಿರ್ದೇಶಕರು; ಮಹೇಶ್ ಬಿ. ಶೆಣಡಗೆ ನಿರ್ದೇಶಕರು; ಕೆ.ಎಸ್. ಸತೀಶ್ ನಿರ್ದೇಶಕರು; ಶ್ರೀಮತಿ ಬಿ.ವಿ. ಮಂಗಳ ಬೂಸ್ನೂರು ನಿರ್ದೇಶಕರು; ಕೆ. ಮುರುಗೇಶಪ್ಪ ವಿಶೇಷ ಆಹ್ವಾನಿತರು; ಸಿ. ಮಂಜುನಾಥ್ ವಿಶೇಷ ಆಹ್ವಾನಿತರು; ಎಸ್.ಪಿ. ವೀರಭದ್ರಪ್ಪ ವ್ಯವಸ್ಥಾಪಕರು



ಎಸ್. ಓಂಕಾರಪ್ಪ
ಉಪಾಧ್ಯಕ್ಷರು

**ಸೂಚನೆ :**

1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ಸು ಬಂದಿರುತ್ತವೆ. ಆದಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಿ, ಪತ್ರಿಕೆ ಪಡೆಯತಕ್ಕದ್ದು ಹಾಗೂ ಇದನ್ನು ಆಹ್ವಾನವೆಂದು ಭಾವಿಸಿ, ಮಹಾಸಭೆಯ ವಿಡಿಯೋ ಕಾನ್ಫರೆನ್ಸ್ / ವರ್ಚ್ಯುಯಲ್ ಮೀಟಿಂಗ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

2) ಬ್ಯಾಂಕಿನ 46ನೇ ವಾರ್ಷಿಕ ಮಹಾಸಭೆ ಇರುವುದರಿಂದ ದಿನಾಂಕ: 23-12-2020ರ ಬುಧವಾರದಂದು ಬ್ಯಾಂಕ್ ರಜೆ ಇರುತ್ತದೆ.

### 46ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟೀಸ್

ದಿನಾಂಕ 23.12.2020ನೇ ಬುಧವಾರ ಮಧ್ಯಾಹ್ನ 12 ಗಂಟೆಗೆ ವಿಡಿಯೋ ಕಾನ್ಫರೆನ್ಸ್/ ವರ್ಚ್ಯುವಲ್ ಮಾಧ್ಯಮದ ಮೂಲಕ ಬ್ಯಾಂಕಿನ 2019-20 ನೇ ಸಾಲಿನ 46 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಎಂ. ಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದು, ಸರ್ವ ಸದಸ್ಯರುಗಳಿಗೂ ವಾರ್ಷಿಕ ವರದಿಯನ್ನು ಅಂಚೆ ಮೂಲಕ ಕಳುಹಿಸಿಕೊಟ್ಟಿರುತ್ತದೆ, ಅವುಗಳ ಪೈಕಿ ಕೆಲವು ವಿಳಾಸ ಬದಲಾದ/ ಸರಿಯಾದ ವಿಳಾಸವಿಲ್ಲದ ಕಾರಣ ವಾಪಸ್ ಬಂದಿರುತ್ತವೆ, ಅಂತಹ ಸದಸ್ಯರುಗಳು ಬದಲಾದ/ಸರಿಯಾದ ವಿಳಾಸವನ್ನು ನೀಡಿ ಸರಿಪಡಿಸಿಕೊಳ್ಳುವುದು, ಹಾಗೂ 'ಕೋವಿಡ್-19' ಸಾಂಕ್ರಾಮಿಕ ರೋಗ ಇರುವ ಕಾರಣ ವಾರ್ಷಿಕ ಮಹಾಸಭೆಗೆ ಸದಸ್ಯರುಗಳು ವಿಡಿಯೋ ಕಾನ್ಫರೆನ್ಸ್/ ವರ್ಚ್ಯುವಲ್ ಮಾಧ್ಯಮದ ಮೂಲಕ ಹಾಜರಾಗಬೇಕಾಗಿರುವುದರಿಂದ 'ZOOM APP' ಅಪ್ಲಿಕೇಶನ್ ನಲ್ಲಿ ಲಾಗಿನ್ ಆಗಿ ಭಾಗವಹಿಸಬೇಕಾಗಿರುತ್ತದೆ, ಕಾರಣ ಸದಸ್ಯರುಗಳು ಬ್ಯಾಂಕಿಗೆ ಆದಷ್ಟು ಬೇಗನೆ ನಿಮ್ಮ ಮೊಬೈಲ್ ನಂಬರುಗಳನ್ನು ಹಾಗೂ ಇ-ಮೇಲ್ ಐಡಿ ಇದ್ದವರು ಇ-ಮೇಲ್ ಐಡಿ ಗಳನ್ನು ಒದಗಿಸಕೆಂದು ಹಾಗೂ ವಾರ್ಷಿಕ ಮಹಾಸಭೆಯಲ್ಲಿ ಎಲ್ಲಾ ಸದಸ್ಯರುಗಳ ಹಾಜರಾತಿ ಕಡ್ಡಾಯವಾಗಿರುವುದರಿಂದ ದಿನಾಂಕ:23.12.2020ನೇ ಬುಧವಾರದ ದಿನ ಮಧ್ಯಾಹ್ನ 12 ಗಂಟೆಗೆ 'ZOOM APP' ಲಿಂಕ್ ಒತ್ತುವುದರ ಮೂಲಕ ತಪ್ಪದೇ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ, WWW.AGM.SHREEMURUGHARAJENDRACOOPBANK.COMನಲ್ಲಿ ಲಾಗಿನ್ ಆಗುವ ಮೂಲಕ ವೀಕ್ಷಿಸಬಹುದು ಅಥವಾ ದೂರವಾಣಿ ಸಂಖ್ಯೆ: 08192-257901/230304 ಮೊಬೈಲ್ ನಂ: 9482142386 ಗೆ ಸಂಪರ್ಕಿಸಬಹುದು.

ಸಹಿ/- ಎಂ. ಜಯಕುಮಾರ್ ಅಧ್ಯಕ್ಷರು | ಸಹಿ/- ಎಸ್. ಓಂಕಾರಪ್ಪ ಉಪಾಧ್ಯಕ್ಷರು | ಸಹಿ/- ಎಸ್.ಪಿ. ವೀರಭದ್ರಪ್ಪ ವ್ಯವಸ್ಥಾಪಕರು

(ರೂ. ಲಕ್ಷಗಳಲ್ಲಿ)

**ಬ್ಯಾಂಕಿನ ಆರ್ಥಿಕ ಪ್ರಗತಿ**

| ವಿವರಗಳು | 31-03-2020 | 31-10-2020 |
|---|---|---|
| 1) ಷೇರು ಬಂಡವಾಳ | 121.41 | 122.75 |
| 2) ಕಾಯ್ದಿಟ್ಟ ನಿಧಿ | 122.32 | 122.32 |
| 3) ಇತರೆ ನಿಧಿಗಳು | 88.88 | 88.37 |
| 4) ಠೇವಣಿಗಳು | 2327.87 | 2641.11 |
| 5) ಸಾಲ ಮತ್ತು ಮುಂಗಡಗಳು | 1415.17 | 1537.78 |
| 6) ದುಡಿಯುವ ಬಂಡವಾಳ | 2716.36 | 3020.72 |
| 7) ನಿವ್ವಳ ಲಾಭ | 12.13 | 51.28 |
| 8) ಸದಸ್ಯರುಗಳು | 6259 | 6239 |


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte